
# ಬೆಳಕಿನ ಸಂಚಲನ

ಸಂ 3, ಸಂ 8
ಡಿಸೆಂಬರ್ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಠಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಅವರ ಭಾಷಣದ ಆಯ್ದ ಭಾಗಗಳು)

**ಅನು: ಶ್ರೀದೇವಿ**

ನಮ್ಮ ಒಳ್ಳೆಯ ಅಥವಾ ಕೆಟ್ಟ ಆಲೋಚನೆ ಇತರರನ್ನು ತಲುಪುತ್ತದೆ ಹಾಗೂ ಸರಪಣಿ ಕ್ರಿಯೆಯನ್ನು (chain reaction) ಪ್ರಾರಂಭಿಸುತ್ತದೆ. ಇದು ಪ್ರಪಂಚದಲ್ಲಿನ ಸಂತೋಷ ಅಥವಾ ದುಃಖವನ್ನು ಹೆಚ್ಚಿಸುತ್ತದೆ. ಆದ್ದರಿಂದ, ನಾವು ಹೆಚ್ಚು ಹೆಚ್ಚು ಜವಾಬ್ದಾರಿಯನ್ನರಿತು ವರ್ತಿಸೋಣ. ನಮ್ಮ ಎಲ್ಲಾ ಆಲೋಚನೆ ಮತ್ತು ಭಾವನೆಗಳನ್ನು ಸಕಾರಾತ್ಮಕ ಹಾಗೂ ಸಂತೋಷಕರವಾಗಿ ಇಟ್ಟುಕೊಳ್ಳೋಣ.

ಯಾವಾಗಲೂ ಸಮಾಧಾನದಿಂದಿರೋಣ. ಕೇವಲ ಇದೊಂದು ನಿಯಮವನ್ನು ಪಾಲಿಸುವುದರಿಂದ ವೈಯಕ್ತಿಕ ಹಾಗೂ ಇಡೀ ಪ್ರಪಂಚದ ಹಿತರಕ್ಷಣೆಯು ಖಾತ್ರಿಯಾಗುತ್ತದೆ.

ಯಾವುದೇ ಸಂದರ್ಭ ಅಥವಾ ವ್ಯಕ್ತಿಗೆ ಅವಿವೇಚಿತರಾಗಿ ಒಡನೆಯೇ ಪ್ರತಿಕ್ರಿಯಿಸಬೇಡಿ. ಕ್ಷಣ ಕಾಲ ಸಮಾಧಾನವಾಗಿರಿ ಹಾಗೂ ಸ್ವಲ್ಪ ತಡೆದು ಪ್ರತಿಕ್ರಿಯಿಸಿ. ಆನಂದ ಸಾಗರವೇ ನಮ್ಮಲ್ಲಿದೆ. ನಾವು ಸಮಾಧಾನದಿಂದಿದ್ದಾಗ ಈ ಸಾಗರಕ್ಕೆ ಸಂಪರ್ಕಗೊಳ್ಳುತ್ತೇವೆ. ಅದರಿಂದ ನಾವು ಅನುಭವಿಸುವ ಶಾಂತಿ ಭಾರಿ ವ್ಯತ್ಯಾಸವನ್ನೇ ಉಂಟುಮಾಡುತ್ತದೆ.

ಒಡನೆಯೇ ಪ್ರತಿಕ್ರಿಯಿಸುವ ಬದಲು ಅಂತರಾಳದ ಸಮಾಧಾನದ ಸ್ಥಿತಿಯಿಂದ ಪ್ರತಿಕ್ರಿಯಿಸೋಣ. ನಾವು ಈ ರೀತಿ ಮಾಡಿದರೆ, ನಮ್ಮ ಪ್ರತಿಕ್ರಿಯೆ ಯಾವಾಗಲೂ ಸಕಾರಾತ್ಮಕ ಹಾಗೂ ಶಾಂತಿಯುತವಾಗಿರುತ್ತದೆ.

ನಮ್ಮ ಪ್ರಪಂಚದ ಮೇಲಾಗುವ ಪರಿಣಾಮವನ್ನು ಅರಿತು, ಸಾಧ್ಯವಾದಷ್ಟೂ ಸಮಾಧಾನದಿಂದಿರಲು ಪ್ರಜ್ಞಾಪೂರ್ವಕ ಪ್ರಯತ್ನಗಳನ್ನು ಮಾಡೋಣ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಡಿಸೆಂಬರ್ 2, 2015ರಂದು, ಮೆಂಟರ್ ನಿಯತಕಾಲಿಕದ (Mentor magazine) ಆಡಳಿತ ಮಂಡಲಿಯವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾರತದಾದ್ಯಂತ ನೂರಾರು ಶಾಲೆಗಳ ಶಾಲಾ ಮುಖ್ಯಸ್ಥರು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(Indian Institute of Science)ಯಲ್ಲಿ ಸೇರಿದ್ದರು. ಅವರಿಗೆ, ಲೈಟ್ ಚಾನಲಿಂಗ್ ಮತ್ತು ಅದರ ಪ್ರಯೋಜನಗಳನ್ನು ನಮ್ಮ ಕಾರ್ಯಕರ್ತರೊಬ್ಬರು ಪರಿಚಯ ಮಾಡಿಕೊಟ್ಟರು. ನಂತರ ಸ್ವಲ್ಪ ಸಮಯ ಅವರೆಲ್ಲಾ ಬೆಳಕನ್ನು ಚಾನಲ್ ಮಾಡಿದರು. ಆ ಸಮಯದಲ್ಲಿ ಅನೇಕ ಶಾಲಾ ಅಧಿಕಾರಿಗಳು ಅಗಾಧವಾದ ಶಾಂತಿಯನ್ನು ಅನುಭವಿಸಿದರು ಹಾಗೂ ತಮ್ಮ ತಮ್ಮ ಶಾಲೆಗಳಲ್ಲಿ ಲೈಟ್ ಚಾನಲಿಂಗ್ ಸೆಷನ್‌ಗಳನ್ನು ನಡೆಸಲು ನಮ್ಮ ಕಾರ್ಯಕರ್ತರನ್ನು ಆಹ್ವಾನಿಸಿದರು.

ಇತ್ತೀಚೆಗೆ ನಮ್ಮ ಕೆಲವು ಕಾರ್ಯಕರ್ತರು, ಬೆಂಗಳೂರಿನ ಸಮೀಪದ ಕುಣಿಗಲ್ ಪಟ್ಟಣಕ್ಕೆ ಹೋಗಿ, 23 ಶಾಲೆಗಳಲ್ಲಿ ಲೈಟ್ ಚಾನಲಿಂಗ್‌ಅನ್ನು ಆಯೋಜಿಸಿದ್ದರು; ಸುಮಾರು 11,000ಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದರು.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ನಾವು ಇನ್ನೊಂದು ವಿಶ್ವ ಚಾನಲ್ಸ್ ದಿನವನ್ನು ಸಮೀಪಿಸುತ್ತಿದ್ದೇವೆ; ಕಾಲ ಎಷ್ಟು ಬೇಗ ಹಾರಿಹೋಯಿತೆನ್ನುವುದನ್ನು ನಂಬಲು ಕಷ್ಟವಾಗುತ್ತದೆ. ಫೆಬ್ರವರಿ 1, 2016ರಂದು, ನಾವು 6ನೇ ವಿಶ್ವ ಚಾನಲ್ಸ್ ದಿನವನ್ನು ಆಚರಿಸಲಿದ್ದೇವೆ. ಪ್ರತಿ ವರ್ಷ ಈ ದಿನದಂದು ಹತ್ತು ಲಕ್ಷಕ್ಕೂ ಹೆಚ್ಚು ಜನರು ಸೇರಿ ವಿಶ್ವ ಶಾಂತಿಗಾಗಿ ಲೈಟ್ ಚಾನಲ್ ಮಾಡುತ್ತಾರೆ.

ನಮ್ಮ ಲೈಟ್ ಚಾನಲ್ ಕಾರ್ಯಕರ್ತರ ಹೃದಯಗಳಲ್ಲಿ ಈ ದಿನ ವಿಶೇಷ ಸ್ಥಾನ ಪಡೆದಿದೆ. ಅವರು ತಮ್ಮ ವೈಯಕ್ತಿಕ ಸಮಯ ಮತ್ತು ಶಕ್ತಿಯನ್ನು ಸಮರ್ಪಿಸಿ ಈ ದಿನದ ಯಶಸ್ಸಿಗಾಗಿ ಅತಿ ಹೆಚ್ಚು ಗಮನಕೊಟ್ಟು ಕೆಲಸ ಮಾಡುತ್ತಾರೆ.

ಗೊಂದಲಕ್ಕೀಡಾಗಿರುವ ಈ ಪ್ರಪಂಚಕ್ಕೆ ಅಗಾಧವಾದ ಬೆಳಕಿನ ಅವಶ್ಯಕತೆಯಿದೆ ಹಾಗೂ ಬೆಳಕು ಮಾತ್ರವೇ ನಮಗಿರುವ ಭರವಸೆ. ಅತಿ ಹೆಚ್ಚು ಬೆಳಕನ್ನು ಕೆಳಗೆ ತರೋಣ ಹಾಗೂ ಒಳ್ಳೆಯ ದಿನಗಳಿಗಾಗಿ ಪ್ರಾರ್ಥಿಸೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗ ವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವ ಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ದಯವಿಟ್ಟು ಬರೆಯಿರಿ.



ಬೆಂಗಳೂರಿನ ವಿದ್ಯಾರಣ್ಯಪುರಮ್‌ನಲ್ಲಿರುವ ಡಿಗ್ನಿಟಿ ಫೌಂಡೇಶನ್ ಕಾಫಿ ಚಾವಡಿಯ ಸದಸ್ಯರು ಡಿಸೆಂಬರ್ 14, 2015ರಂದು ತಮ್ಮ ಕೇಂದ್ರದಲ್ಲಿ ಲೈಟ್ ಚಾನಲಿಂಗ್ ಮಾಡುತ್ತಿರುವುದು.

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ನಾವು ಬೆಳಕನ್ನು ಆಯ್ಕೆಮಾಡಿಕೊಂಡಿದ್ದೇ ಆದರೆ ಬೆಳಕು ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುತ್ತದೆ.
- ನಾವು ಪ್ರೀತಿಯುಳ್ಳವರಾಗಿದ್ದರೆ ಯಾವುದೇ ಸಂಬಂಧವನ್ನು ನಿಭಾಯಿಸಬಹುದು. ನಾವು ಇತರರನ್ನು ಪ್ರೀತಿಯಿಂದ ಕಾಣಬೇಕು, ಇತರರ ಅಭಿಪ್ರಾಯ ಮತ್ತು ಭಾವನೆಗಳನ್ನು ಗೌರವಿಸಬೇಕು.
- ವಿವೇಚನೆಯಿಂದ ಜೀವನ ನಡೆಸುವುದು ಹಾಗೂ ಇತರರೂ ಜೀವಿಸಲು ಅವಕಾಶಮಾಡಿಕೊಡುವುದು ಆಧ್ಯಾತ್ಮಿಕವಾದುದು. ನಾವು ಬೆಳಕಿನೊಂದಿಗೆ ಶ್ರುತಿಗೊಂಡರೆ ನಮ್ಮಲ್ಲಿ ಎಲ್ಲವೂ ಚೆನ್ನಾಗಿರುತ್ತದೆ.
- ನಾವು ಕಷ್ಟ ಪಡಬೇಕಾಗಿಲ್ಲ. ಯಾವಾಗಲೂ ಸಂತೋಷವಾಗಿರುವುದು, ಸಮಸ್ಯೆಗಳಿಂದ ಮುಕ್ತರಾಗಿರುವುದು ನಮ್ಮ ಜನ್ಮಸಿದ್ಧ ಹಕ್ಕು. ಇಡೀ ವಿಶ್ವವೇ ನಮಗೆ ಸಹಾಯ ಮಾಡಲು ಕಾಯುತ್ತಿದೆ.
- ನಿಮ್ಮ ಭಾವನೆಗಳು ಮತ್ತು ಆಲೋಚನೆಗಳನ್ನು ಅದುಮಿಡಬಾರದು. ನಕಾರಾತ್ಮಕವಾದುದನ್ನು ತಿರಸ್ಕರಿಸಬೇಕು. ನೀವು ಒಮ್ಮೆ ತಿರಸ್ಕರಿಸಿದರೆ ಅವು ಹೊರಟು ಹೋಗುತ್ತವೆ. ನೀವು ಅದುಮಿಟ್ಟರೆ, ಅವು ನಮ್ಮ ಶರೀರದಲ್ಲಿಯೇ ಉಳಿದುಬಿಡುತ್ತವೆ.
- ಹೊರ ಪ್ರಪಂಚ ನಮ್ಮ ಮೇಲೆ ಪರಿಣಾಮ ಬೀರುವ ಹಾಗೆ, ನಾವು ಕೂಡ ಹೊರ ಪ್ರಪಂಚದ ಮೇಲೆ ಪರಿಣಾಮ ಬೀರುತ್ತೇವೆ. ಆದ ಕಾರಣ ವೈಯಕ್ತಿಕವಾಗಿ ನಾವು ಸರಿಯಾದ ಜೀವನ ನಡೆಸುವುದು, ಶಾಂತಿ ಮತ್ತು ಪ್ರೀತಿಯನ್ನು ಮಾತ್ರವೇ ಹೊರಸೂಸುವುದು ಅತಿ ಮುಖ್ಯವಾಗಿದೆ.
- ಅಧಿಕ ಹಣ ಮತ್ತು ಲೌಕಿಕ ವಸ್ತುಗಳನ್ನು ಹೊಂದಿರುವುದನ್ನು ಸಾಮಾನ್ಯವಾಗಿ ಸಮೃದ್ಧಿ ಎಂದು ಅರ್ಥಮಾಡಿಕೊಂಡಿದ್ದೇವೆ. ನಿಜವಾದ ಸಮೃದ್ಧಿ ಎಂದರೆ ಎಲ್ಲಾ ಸಮೃದ್ಧಿಗಳ ಮೂಲಕ್ಕೆ ಸಂಪರ್ಕಗೊಳ್ಳುವುದು. ಆ ಮೂಲವೇ ದೇವರು. ಜ್ಞಾನ, ಚೈತನ್ಯಗಳು, ಅಗಾಧವಾದ ಪ್ರೀತಿ, ಉಲ್ಲಾಸಕರವಾದ ಜೀವನ, ಅಧಿಕವಾದ ಜೀವಶಕ್ತಿ ಇತ್ಯಾದಿಗಳನ್ನು ಹೊಂದಿರುವುದನ್ನು ಕೂಡ ಸಮೃದ್ಧಿ ಎನ್ನಬಹುದು.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 5023 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.39 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಅನಿರೀಕ್ಷಿತ ಆಯ್ಕೆ...

**ಉಷಾ ಸತೀಶ್‌ಚಂದ್ರ**

ಕಳೆದ ಕೆಲವು ವರ್ಷಗಳಿಂದ ಲೈಟ್ ಚಾನಲಿಂಗ್ ಹಲವರನ್ನು ಹುರಿದುಂಬಿಸಿದೆ. ಈ ಕೆಲಸ ಏಕೆ ಇಷ್ಟೊಂದು ಆಕರ್ಷಕವಾಗಿದೆ? ಈ ಕೆಲಸವನ್ನು ಮುಂದುವರೆಸಲು ಯಾವುದು ನಮ್ಮನ್ನು ಪ್ರೇರೇಪಿಸುತ್ತದೆ ಅಥವಾ ಹುರಿದುಂಬಿಸುತ್ತದೆ? ಎನ್ನುವ ಪ್ರಶ್ನೆ ಯಾವಾಗಲೂ ಮೂಡುತ್ತದೆ.

ಫೆಬ್ರವರಿ 26, 2009ರಂದು ನಡೆದ ಲೈಟ್ ಚಾನಲಿಂಗ್ ಘಟನೆಯನ್ನು ಒಂದು ಐತಿಹಾಸಿಕ ಕ್ಷಣವೆಂದು ಗುರೂಜಿ ಕೃಷ್ಣಾನಂದರವರು ತಿಳಿಸಿದರು. ಆ ಸಂದರ್ಭದಲ್ಲಿ ಒಂದು ವಿಶೇಷವಾದ ವಿಶ್ವಾತ್ಮಕ ಚೈತನ್ಯವನ್ನು ಕೆಳತರಲಾಯಿತು. ಲೈಟ್ ಚಾನಲಿಂಗ್ ಬಹಳ ಶಕ್ತಿಯುತವಾದ ತಂತ್ರ. ಒಂದು ನಿಮಿಷ ನೀವು ಬೆಳಕನ್ನು ಅನುಭವಿಸಿದರೆ ನೀವು ಪರಮಶಾಂತಿಯನ್ನು ಅನುಭವಿಸುವಿರಿ. ನೀವು ಬೆಳಕನ್ನು ಚಾನಲ್ ಮಾಡಿದರೆ ಅತ್ಯುತ್ತಮವಾದ ಕಾರ್ಯವನ್ನು ಮಾಡಿದಂತೆ. ಇದು ಯಾವ ಷರತ್ತೂ ಇಲ್ಲದ ಒಂದು ಪರಿಶುದ್ಧವಾದ ಕಾರ್ಯ ಎನ್ನುವುದು ಈ ಮಹತ್ವದ ಘಟನೆಯ ಸಂದೇಶವಾಗಿತ್ತು.

ಮೇ 7, 2012ರ 'ಬೆಳಕಿನಿಂದ ಕ್ರಾಂತಿ' ಎನ್ನುವ ಘಟನೆಯು ಪರಿವರ್ತನೆಗಾಗಿ ಹಾಗೂ ಆಯ್ಕೆಮಾಡಿಕೊಳ್ಳಲು ನಮಗೆ ಸಹಾಯ ಮಾಡುವುದಕ್ಕೋಸ್ಕರವಾಗಿತ್ತು. ಒಂದು ವಿಶೇಷವಾದ ಅನುಭವಕ್ಕಾಗಿ ಎಲ್ಲಾ ಮಟ್ಟಗಳಲ್ಲಿ ವಿಶೇಷವಾದ ಪ್ರೀತಿ, ಶ್ರಮ ಮತ್ತು ಸಿದ್ಧತೆ ನಡೆದಿತ್ತು.

ಬೆಳಕನ್ನು ಚಾನಲ್ ಮಾಡುವುದನ್ನು ಕಲಿಸಿಕೊಡುವ ಈ ಶ್ರೇಷ್ಠವಾದ ಕೆಲಸ ಎಲ್ಲಾ ಸಮಯದಲ್ಲೂ ದೇವರ ಜೊತೆ ಆಧ್ಯಾತ್ಮಿಕ ಸಂಸರ್ಗ(communion)ದಿಂದಿರಲು ನಮಗೆ ಸಹಾಯ ಮಾಡುತ್ತದೆ. ಈ ಎರಡು ಘಟನೆಗಳ ವಿಶೇಷವಾದ ಅನುಭವವನ್ನು ನಾವು ಪ್ರತಿ ಲೈಟ್ ಚಾನಲಿಂಗ್ ಸೆಷನ್‌ನಲ್ಲೂ ಮತ್ತೆ ಅನುಭವಿಸುತ್ತೇವೆ. ನಾವು ಮಕ್ಕಳ ಜೊತೆ ಬೆಳಕನ್ನು ಚಾನಲ್ ಮಾಡುವುದನ್ನು ಆಯ್ಕೆಮಾಡಿಕೊಂಡಾಗ ಸಮಾನರೂಪದ ಸಿದ್ಧತೆ ಮತ್ತು ಸನ್ನಿವೇಶವು ಸೃಷ್ಟಿಯಾಗುತ್ತದೆ.

'ಈ ತಂತ್ರ ದೇವರನ್ನು ನೇರವಾಗಿ ಮುಟ್ಟಲು ಸಹಾಯ ಮಾಡುತ್ತದೆ! ನೀವು ಮನಸ್ಸನ್ನು ತೆರೆದುಕೊಳ್ಳಿ ಅವನನ್ನು ಪಡೆಯುವಿರಿ' ಎಂದು ಸೆಷನ್ ಮುಗಿದ ಬಳಿಕ ಒಬ್ಬ ಶಿಕ್ಷಕರು ಆನಂದ ಬಾಷ್ಪದೊಂದಿಗೆ ಭಾವೋದ್ವೇಗದಿಂದ ಹೇಳಿದಾಗ ಈ ಆಲೋಚನೆ ನನ್ನಲ್ಲಿ ಬಲಗೊಂಡಿತು. ನಾನು ಭೀಮ್‌ಸೇನ್ ಜೋಷಿಯವರ ಹಾಡುಗಾರಿಕೆಯನ್ನು ನೆನಪು ಮಾಡಿಕೊಳ್ಳುತ್ತೇನೆ. ಅವರ ಅನುರಣಿಸುವ, ತುಂಬುದನಿಯ ಸಿರಿ ಕಂಠವು ನಮ್ಮನ್ನು ಎಲ್ಲಾ ಮೇರೆಗಳನ್ನು ಮೀರಿ ಕೊಂಡೊಯ್ಯುವುದು. ಅದು ನಿಮ್ಮ ಇಡೀ ದಮನಿಯಲ್ಲಿ ಪ್ರವಹಿಸುತ್ತದೆ. ನೀವು ಅದನ್ನು ಪ್ರತಿ ಕಣದಲ್ಲೂ ಅನುಭವಿಸಿ, ಪ್ರತಿಧ್ವನಿಸಬಹುದು. ರಾಗ ಅಥವಾ ಆಲಾಪನೆ ನಿಮಗೆ ಅರ್ಥವಾಗದೆ ಇರಬಹುದು, ಆದರೆ ಅವರು ನಿಮ್ಮನ್ನು ಅವರೊಡನೆ ಕರೆದೊಯ್ಯುತ್ತಾರೆ ಹಾಗೂ ಅವರು ಏನನ್ನು ಅನುಭವಿಸುವರೋ ಅದನ್ನು ನೀವೂ ಅನುಭವಿಸುವಿರಿ! ಅಂತಹ ಕ್ಷಣಗಳಲ್ಲಿ ನಾವೆಲ್ಲರೂ ದೇವರನ್ನು ಮುಟ್ಟಬಹುದು ಎಂದು ನನಗನಿಸುತ್ತದೆ.

ಲೈಟ್ ಚಾನಲಿಂಗ್ ಸೆಷನ್‌ಗಳಲ್ಲಿ ನಾವೆಲ್ಲರೂ ದೇವರ ಚೈತನ್ಯಗಳಿಗೆ ಸಂಪರ್ಕಗೊಳ್ಳಲು, ಅನುಭವಿಸಲು ಮತ್ತು ಅದನ್ನು ಹರಡಲು ಒಪ್ಪಿಗೆ ನೀಡಿ ಸಿದ್ಧರಾಗುತ್ತೇವೆ. ಆದರೆ ದೇವರನ್ನು ಅನುಭವಿಸುವುದರಲ್ಲಿರುವ ಸೂಕ್ಷ್ಮತೆಗಳು, ಸಂಗೀತದಲ್ಲಿರುವ ಸೂಕ್ಷ್ಮತೆಗಳಂತೆ ಅರಿವಿಗೆ ಮೀರಿದವುಗಳಾಗಿವೆ. ಕಾಲ ಕಳೆದಂತೆ ಉನ್ನತ ಸ್ಥಿತಿಗೆ ಕೊಂಡೊಯ್ಯುವ ಈ ಅನುಭವಗಳು ಆಳವಾಗಿ ಹಾಗೂ ಬಲವಾಗಿ ಬೆಳೆಯಬಹುದು. ಬೆಳಕಿನ ಸಾಗರದ ಜೊತೆಗಿನ ತಕ್ಷಣದ ಸಂಪರ್ಕ ಈ ದೈವೀ ಚೈತನ್ಯಗಳನ್ನು ಸ್ವೀಕರಿಸಲು ನಮ್ಮ ಹೃದಯಗಳನ್ನು ತೆರೆಸಬಹುದು. ಅಂತಹ ಸ್ಥಿತಿ ಮತ್ತು ಸನ್ನಿವೇಶದಲ್ಲಿ, ಹೆಚ್ಚು ಶ್ರಮವಿಲ್ಲದೆ, ಸರ್ವೋತ್ಕೃಷ್ಟ ಹಾಗೂ ಪರಿಶುದ್ಧವಾದ ಬೆಳಕನ್ನು ನಾವು ಅನುಭವಿಸುತ್ತೇವೆ!

'ಮೊದಲ ಸೆಷನ್‌ನಲ್ಲಿ ನನಗೆ ಯಾವ ಅನುಭವವೂ ಆಗಲಿಲ್ಲ. ನಂತರದ ಸೆಷನ್‌ಗಳಲ್ಲಿ ಅದು ಉತ್ತಮಗೊಳ್ಳತೊಡಗಿತು. ಕೊನೆಯ ಸೆಷನ್‌ನಲ್ಲಿ ನೀವು ಬೆಳಕಿನ ಬಗೆಗೆ ಹೇಳಿದ ಎಲ್ಲವನ್ನೂ ಅನುಭವಿಸಲು ನನಗೆ ಸಾಧ್ಯವಾಯಿತು' ಎಂದು ಅನುಕ್ರಮವಾದ ನಾಲ್ಕು ಸೆಷನ್‌ಗಳಲ್ಲಿ ಭಾಗವಹಿಸಿದ ಶಿಕ್ಷಕರೊಬ್ಬರು ಹೇಳಿದರು.

'ಅಭ್ಯಾಸವು ಪರಿಪೂರ್ಣತೆಗೆ ಸಾಧನವೇ ಅಥವಾ ಅತ್ಯುತ್ತಮವಾದುದನ್ನು ಅನುಭವಿಸಲು ಮಾಡಿಕೊಂಡ ಆಯ್ಕೆಯು ಪರಿಪೂರ್ಣತೆಗೊಂದು ದ್ವಾರವೇ?' ಅಂತಹ ಅನುಭವಗಳು ನಾವು ಚಿಂತನೆ ಮಾಡಲು ಮಾರ್ಗಗಳನ್ನು ತೆರೆದಿಡುತ್ತವೆ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ನಮಗೆ ಸಹಾಯಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ದಯವಿಟ್ಟು ಈ ವಾರ್ತಾಪತ್ರವನ್ನು ಹಂಚಿಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್ ಸೈಟ್ www.lightchannels.com ನಿಂದ ಡೌನ್ ಲೋಡ್ (download) ಮಾಡಿಕೊಳ್ಳಬಹುದು.

ಶನಿವಾರ (ಸಂಜೆ 5:00 - 5:30)
ಮಂಚ್‌ಕಿನ್ಸ್, ನಂ. 890,
38ನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಶ್ರೀಮತಿ ಶುಭ ಎಸ್.

**ಸೋಲಾಪೂರ್**

ಸೋಮವಾರ ಮತ್ತು ಗುರುವಾರ
(ಸಂಜೆ 7:00 - 7:15)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

**ಚೆನ್ನೈ**

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.


**ಪುಣೆ**

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್

**ಮೀರಜ್**

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು "Experiences of Light Channels" ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್ ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಲೈಟ್ ಚಾನಲಿಂಗ್ ನಿಮಗೆ ಹೇಗೆ ಪ್ರಯೋಜನ ತಂದಿದೆ ಎಂಬ ಪ್ರಶ್ನೆಯನ್ನು ನಾನು ಶಾಲೆಯೊಂದರ ಪ್ರಿನ್ಸಿಪಾಲರನ್ನು ಕೇಳಿದಾಗ ಅವರು ಒಂದು ಸುಂದರವಾದ ಅನುಭವವನ್ನು ಹಂಚಿಕೊಂಡರು. ‘ನಾನು ಏನು ಹೇಳಲಿ? ಎಲ್ಲ ಸಮಯದಲ್ಲೂ ನಾನು ದೈವೀ ಕೃಪೆಯನ್ನು ಅನುಭವಿಸುತ್ತಿದ್ದೇನೆ. ಈ ತಂತ್ರ ಅತ್ಯಂತ ಸೊಗಸಾಗಿದೆ. ಇದರಲ್ಲಿ ನೀವು ವಿಶ್ವಾತ್ಮಕ ಬೆಳಕನ್ನು ನಿಮ್ಮ ಮೂಲಕ ಹರಿಯುವಂತೆ ಕೇಳಿಕೊಳ್ಳುವಿರಿ. ನೀವು ಸಂಪೂರ್ಣ ನಿಸ್ವಾರ್ಥಿಯಾದಾಗ ಮತ್ತು ನಿಮಗಾಗಿ ಏನನ್ನೂ ಕೇಳದೆ ಇದ್ದಾಗ, ದೈವೀ ಕೃಪೆ ತಾನಾಗಿಯೇ ಇಳಿದು ಬರುತ್ತದೆ! ನನ್ನ ಶಾಲೆಯಲ್ಲಿ ನಾನು ಏನನ್ನೂ ಕೇಳದೆ ಇದ್ದರೂ, ನನಗೆ ಬೇಕಾದ ಎಲ್ಲಾ ಸಹಾಯವನ್ನು ಪಡೆಯುತ್ತೇನೆ. ದೈವೀ ಕೃಪೆಗೆ ಒಳಗಾದ ಅನೇಕ ಪ್ರಸಂಗಗಳ ಉದಾಹರಣೆಯನ್ನು ಕೊಡಬಲ್ಲೆ’ ಎಂದು ಅವರು ಹೇಳಿದರು.

–ಉಷಾ ಸತೀಶ್‌ಚಂದ್ರ, ಕಾರ್ಯಕರ್ತೆ

ಬೆಂಗಳೂರಿನ ಕೂಕ್ಸ್ ಟೌನ್‌ನಲ್ಲಿನ ಸಿದ್ಧಿ ವಿನಾಯಕ ದೇವಸ್ಥಾನದ ಲೈಟ್ ಚಾನಲಿಂಗ್ ಕೇಂದ್ರದಲ್ಲಿ ನಾನು ಲೈಟ್ ಚಾನಲಿಂಗ್ ಮಾಡುವುದನ್ನು ಕಲಿತೆ. ನಾನು ಅದನ್ನು ದಿನದಲ್ಲಿ ಎರಡು ಸಲ ಅಭ್ಯಾಸ ಮಾಡುತ್ತಿದ್ದೇನೆ. ಇದು ಅತ್ಯಂತ ಶಕ್ತಿಯುತವಾದ ತಂತ್ರ. ಇದು ನನಗೆ ಸಮಾಧಾನ ತಂದಿದೆ. ನನಗಿದ್ದ ಅಸಿಡಿಟಿ ಕಡಿಮೆಯಾಗಿದೆ ಮತ್ತು ರಕ್ತದ ಒತ್ತಡ ಸಮಸ್ಯೆ ಈಗ ಇಲ್ಲವಾಗಿದೆ. ಇದು ನನ್ನ ಕುಟುಂಬದವರೆಲ್ಲರಿಗೂ ಸಂತೋಷ ತಂದಿದೆ.

–ಕಾಂತಿ, ಲೈಟ್ ಚಾನಲ್

ನಾನು ಲೈಟ್ ಚಾನಲಿಂಗ್ ಮಾಡುತ್ತಿರುವಾಗ, ಬೆಳಕಿನ ಸಾಗರದ ಮೇಲೆ ಕುಳಿತಿರುವ ಹಾಗೆ ಅನಿಸಿತು ಹಾಗೂ ಅದೊಂದು ವಿಸ್ಮಯ ಮತ್ತು ಅತ್ಯದ್ಭುತವಾದ ಅನುಭವವಾಗಿತ್ತು. ನಾನು ಇಷ್ಟು ಚೆನ್ನಾಗಿ ಧ್ಯಾನ ಮಾಡುತ್ತಿರುವುದು ಇದೇ ಮೊದಲು.

–ಅಮೋಘ್ ಪಿ, 4ನೇ ತರಗತಿ
ಆರ್.ಎಮ್.ಎಸ್. ಇಂಟರ್‌ನ್ಯಾಷನಲ್ ಸ್ಕೂಲ್,
ಬೆಂಗಳೂರು

ಇಂದಿನ ಮಕ್ಕಳು ಬಹಳಷ್ಟು ವಿಷಯಗಳ ಪ್ರಭಾವಕ್ಕೆ ಒಳಪಟ್ಟಿದ್ದಾರೆ. ಚಿತ್ತಚಾಂಚಲ್ಯ ಹಾಗೂ ಹೆಚ್ಚು ಗೊಂದಲವಿದೆ. ಏಕಾಗ್ರತೆಯಿಂದಿರುವುದು ಅತಿ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಲೈಟ್ ಚಾನಲಿಂಗ್ ಹೆಚ್ಚು ಸಹಾಯ ಮಾಡುತ್ತದೆ ಎಂದು ನನಗನಿಸುತ್ತದೆ. ಹಾಗೂ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಇದು ಸಹಾಯ ಮಾಡುತ್ತದೆ ಎಂದು ನಂಬಿದ್ದೇನೆ.

–ವೆಂಕಟರಾಯಪ್ಪ, ಮುಖ್ಯೋಪಾಧ್ಯಾಯರು,
ಶ್ರೀಮತಿ ಮುನಿಓಬಮ್ಮ ಕಾರ್ಪೋರೇಷನ್
ಹೈಸ್ಕೂಲ್, ಬೆಂಗಳೂರು

# ವಿಶ್ವ ಚಾನಲ್ಸ್ ದಿನ
# 1ನೇ ಫೆಬ್ರವರಿ 2016

**ಈ ದಿನ ನಿಮಗೆ ಅನುಕೂಲವಾದ ಯಾವುದೇ ಸಮಯದಲ್ಲಿ ಕನಿಷ್ಠ 3 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡುವುದರ ಮೂಲಕ ಈ ಸಂಚಲನದಲ್ಲಿ ಭಾಗವಹಿಸಿ.**

**ಇತ್ತೀಚಿನ ಮಾಹಿತಿಗಳನ್ನು ಪಡೆಯಲು, 022-61816363 ಕ್ಕೆ ಒಂದು ಮಿಸ್ಡ್ ಕಾಲ್ ಕೊಡುವುದರ ಮೂಲಕ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ.**

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ